# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 32 ಫ್ರಾ.ಸಾ. : 12**

| | | |
|---|---|---|
| ಸಾಕ್ಷಿಯ ಹೆಸರು | : | ವಾಹಿದ್ ಖಾನ್ ಆಯೂಬ್ ಖಾನ್ ಪಠಾಣ್ |
| ತಂದೆಯ ಹೆಸರು | : | ಆಯೂಬ್ ಖಾನ್ ಪಠಾಣ್ |
| ವಯಸ್ಸು | : | 35 ವರ್ಷ |
| ಕೆಲಸ | : | ಮೆಕ್ಯಾನಿಕ್ ಕೆಲಸ |
| ವಾಸ | : | ಖಾನಾಪುರ |

**ದಿನಾಂಕಃ 21-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

(ಸಾಕ್ಷಿಯು ತನಗೆ ಕನ್ನಡ ಭಾಷೆ ಸ್ವಲ್ಪ-ಸ್ವಲ್ಪ ತಿಳಿಯುತ್ತದೆ ಹಾಗೂ ಹಿಂದಿ ಭಾಷೆ ಚೆನ್ನಾಗಿ ತಿಳಿದಿರುತ್ತದೆ ಎಂದು ಹೇಳಿದ್ದು, ಸರಕಾರಿ ಅಭಿಯೋಜಕರಿಗೆ, ಆರೋಪಿ ಪರ ವಕೀಲರಿಗೆ ಹಾಗೂ ನ್ಯಾಯಾಧೀಶರಿಗೆ ಹಿಂದಿ ಭಾಷೆ ಬರುತ್ತಿದ್ದು, ಸಾಕ್ಷಿಯು ಹಿಂದಿ ಭಾಷೆಯಲ್ಲಿ ನೀಡಿದ ಸಾಕ್ಷ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ದಾಖಲಿಸಿಕೊಳ್ಳಲಾಯಿತು)

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ಕಳೆದ 18-20 ವರ್ಷಗಳಿಂದ ಖಾನಾಪುರದ ಗಾಂಧಿನಗರದಲ್ಲಿ ಗೋವಾ-ಬೆಳಗಾಂವ ರಸ್ತೆಯಲ್ಲಿ ಇಂಡಿಯನ್ ಮೋಟಾರ್ಸ್ ಗ್ಯಾರೇಜ್ ನ್ನು ಇಟ್ಟುಕೊಂಡು, ಮೆಕ್ಯಾನಿಕ್ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. 1 ಮತ್ತು 2 ನೇ ಆರೋಪಿತರು ನನಗೆ ಗೊತ್ತು. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಕಳೆದ 6-7 ವರ್ಷಗಳಿಂದ 2 ನೇ ಆರೋಪಿಯು 1 ನೇ ಆರೋಪಿಗೆ ಸಂಬಂಧಿಸಿದ ಟ್ರಕ್ ಗಳನ್ನು ನಮ್ಮ ಗ್ಯಾರೇಜ್ ಗೆ ರಿಪೇರಿಗಾಗಿ ತರುತ್ತಿದ್ದು, ನಾನು ರಿಪೇರಿ ಕೆಲಸ ಮಾಡಿಕೊಡುತ್ತಿದ್ದೆ. ನಾನು ಟ್ರಕ್ ರಿಪೇರಿ ಮಾಡಿಕೊಡುತ್ತಿದ್ದರಿಂದ 1 ನೇ ಆರೋಪಿಯು ನಮ್ಮ ಗ್ಯಾರೇಜ್ ಗೆ ಬರುತ್ತಿದ್ದ ಹಾಗೂ ಹಣ ಪಾವತಿ ಮಾಡುತ್ತಿದ್ದ.

2. ದಿಃ 16-10-2018 ರಂದು ರಾತ್ರಿ 08-00 ಗಂಟೆ ಸಮಯದಲ್ಲಿ ನಾನು ನನ್ನ ಗ್ಯಾರೇಜ್ ನಲ್ಲಿದ್ದಾಗ, 2 ನೇ ಆರೋಪಿಯು ಒಂದು ಜೆನ್ ಕಾರಿನಲ್ಲಿ ನಮ್ಮ ಗ್ಯಾರೇಜ್ ಗೆ ಬಂದು, ನನ್ನ ಬಳಿ ಮೊಬೈಲ್ ಪಡೆದುಕೊಂಡು ಸ್ವಲ್ಪ ದೂರ ಹೋಗಿ, ಯಾರೊಂದಿಗೋ

ಫೋನ್ ನಲ್ಲಿ ಮಾತನಾಡಿ, ಪುನಃ ವಾಪಸ್ ಬಂದು ನನ್ನ ಫೋನ್ ನ್ನು ನನಗೆ ನೀಡಿ, ತಾನು ಮನೆಯಲ್ಲಿ ಜಗಳವಾಡಿಕೊಂಡು ಬಂದಿರುವುದಾಗಿ ಹೇಳಿ, ನನ್ನ ಬಳಿ ರೂ.2,000/- ಗಳನ್ನು ಪಡೆದುಕೊಂಡು, ತಾನು ತಂದಿದ್ದ ಕಾರ್ ನ್ನು ಚಾವಿ ಸಮೇತ ನಮ್ಮ ಗ್ಯಾರೇಜ್ ನ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿ, ತಾನು ಬೆಳಗಾಂವಗೆ ಹೋಗುವುದಾಗಿ ಹೇಳಿ ಹೋಗಿರುತ್ತಾನೆ.

3. ದಿಃ 17-10-2018 ರಂದು ಬೆಳಿಗ್ಗೆ 1, 2 ಮತ್ತು 4 ನೇ ಆರೋಪಿಗಳು ಒಂದು ಕಾರಿನಲ್ಲಿ ನಮ್ಮ ಗ್ಯಾರೇಜ್ ಗೆ ಬಂದು, 1 ಮತ್ತು 2 ನೇ ಆರೋಪಿಗಳು ಕಾರಿನಿಂದ ಇಳಿದಿರುತ್ತಾರೆ ಹಾಗೂ 4 ನೇ ಆರೋಪಿ ಕಾರಿನಲ್ಲಿಯೇ ಕುಳಿತುಕೊಂಡಿದ್ದು, 2 ನೇ ಆರೋಪಿ ನಮ್ಮ ಗ್ಯಾರೇಜ್ ನಲ್ಲಿ ನಿಲ್ಲಿಸಿಟ್ಟ ಕಾರನ್ನು 1 ಮತ್ತು 4 ನೇ ಆರೋಪಿಗಳು ನೋಡಿಕೊಂಡು, ನನ್ನೊಂದಿಗೆ ಮಾತನಾಡಿ ಪುನಃ ತಾವು ತಂದಿದ್ದ ಕಾರಿನಲ್ಲಿಯೇ ಮೂರೂ ಜನರು ಬೆಳಗಾಂವಗೆ ಹೋಗುತ್ತೇವೆ ಎಂದು ಹೇಳಿ ಹೋಗಿರುತ್ತಾರೆ. ನಂತರ ದಿಃ 18-10-2018 ರಂದು 1 ನೇ ಆರೋಪಿಯು ನನ್ನ ಮೊಬೈಲ್ ಗೆ ಕರೆ ಮಾಡಿ, 2 ನೇ ಆರೋಪಿ ನಿಲ್ಲಿಸಿಟ್ಟ ಕಾರ್ ಎಲ್ಲಿದೆ ಎಂದು ಕೇಳಿದ್ದು, ಅದಕ್ಕೆ ನಾನು ಆತ ಎಲ್ಲಿ ನಿಲ್ಲಿಸಿಟ್ಟಿದ್ದನೋ ಅದೇ ಜಾಗದಲ್ಲಿ ಇರುತ್ತದೆ ಎಂದು ಹೇಳಿದ್ದು, ಆಗ 1 ನೇ ಆರೋಪಿ ಸದರಿ ಕಾರ್ ನ್ನು ಸ್ಕ್ರ್ಯಾಪ್ ಮಾಡಿ ಬಿಡು ಅಥವಾ ಒಂದು ಗುಂಡಿ ತೋಡಿ ಅದನ್ನು ಮುಚ್ಚಿಬಿಡು ಎಂದು ಹೇಳಿರುತ್ತಾನೆ, ಆಗ ನಾನು ನೋಡೋಣ ಎಂದು ಹೇಳಿ, ಕರೆಯನ್ನು ಬಂದ್ ಮಾಡಿ, ಮರುದಿನ ಅಂದರೆ ದಿಃ 19-10-2018 ರಂದು ಬೆಳಿಗ್ಗೆ ನೇರವಾಗಿ ನಾನು ಖಾನಾಪುರ ಪೊಲೀಸ್ ಠಾಣೆಗೆ ಹೋಗಿ, 1 ನೇ ಆರೋಪಿ ನನಗೆ ಕರೆ ಮಾಡಿದ ವಿಷಯವನ್ನು ತಿಳಿಸಿರುತ್ತೇನೆ. ಆಗ ಪೊಲೀಸರು ಇದೊಂದು ದಿನ ಸಂಜೆಯ ವರೆಗೆ ಕಾದು ನೋಡೋಣ ಎಂದು ಹೇಳಿರುತ್ತಾರೆ.

4. ದಿಃ 20-10-2018 ರಂದು ಬೆಳಿಗ್ಗೆ 1 ನೇ ಆರೋಪಿ ನನಗೆ ಕರೆ ಮಾಡಿ, ಸದರಿ ಕಾರ್ ನ್ನು ಏನು ಮಾಡಿದೆ ಎಂದು ಕೇಳಿದ್ದು, ಆಗ ನಾನು 2 ನೇ ಆರೋಪಿ ಯಾವ ರೀತಿ ನಿಲ್ಲಿಸಿದ್ದನೋ ಅದೇ ರೀತಿ ಇರುತ್ತದೆ ಎಂದು ಹೇಳಿದ್ದು, ಅದಕ್ಕೆ 1 ನೇ ಆರೋಪಿಯು ಸದರಿ ಕಾರ್ ನ ನಂಬರ್ ಪ್ಲೇಟ್ ತೆಗೆದು, ಕಾರ್ ನ್ನು ಮುಚ್ಚಿಡು ಎಂದು ಹೇಳಿರುತ್ತಾನೆ. ಆ ಸಮಯದಲ್ಲಿ ನನ್ನ ಬಳಿ ವಿವೋ ಕಂಪನಿಯ ಮೊಬೈಲ್ ಇದ್ದು, ನನಗೆ ಬಂದ ಹಾಗೂ ಹೋದ ಕರೆಗಳು ಸದರಿ ಮೊಬೈಲ್ ನಲ್ಲಿ ಆಟೋ ರೆಕಾರ್ಡಿಂಗ್ ಆಗುವ ವ್ಯವಸ್ಥೆ ಇದ್ದು, ಆರೋಪಿಗಳು ಮಾತನಾಡಿದ ಕರೆಗಳೂ ಸಹ ರೆಕಾರ್ಡ್ ಆಗಿದ್ದವು.

5. ದಿಃ 27-10-2018 ರಂದು ಬೆಳಿಗ್ಗೆ ಸುಮಾರು 11-00 ಗಂಟೆಗೆ ಕಾರವಾರ ಪೊಲೀಸರು 2 ನೇ ಆರೋಪಿಯನ್ನು ನಮ್ಮ ಗ್ಯಾರೇಜ್ ಬಳಿ ಕರೆದುಕೊಂಡು ಬಂದು, ಇಲ್ಲಿ ವಾಹಿದ್ ಎನ್ನುವವರು ಯಾರು ಎಂದು ಕೇಳಿದ್ದು, ಅದಕ್ಕೆ ನಾನೇ ಎಂದು ಹೇಳಿರುತ್ತೇನೆ. ನಂತರ ಪೊಲೀಸರು 2 ನೇ ಆರೋಪಿಗೆ ಕಾರ್ ನ್ನು ಎಲ್ಲಿ ನಿಲ್ಲಿಸಿಟ್ಟಿದ್ದೀಯಾ ಎಂದು ಕೇಳಿದ್ದು, ಆಗ 2 ನೇ ಆರೋಪಿಯು ನಮ್ಮ ಗ್ಯಾರೇಜ್ ನಲ್ಲಿ ತಾನು ನಿಲ್ಲಿಸಿಟ್ಟ ಕಾರ್ ನ್ನು ತೋರಿಸಿದ್ದು, ಪೊಲೀಸರು ಸದರಿ ಕಾರ್ ತೆಗೆದು ನೋಡಿದಾಗ, ಚಾವಿ ಕಾರಿನಲ್ಲಿಯೇ ಇತ್ತು, ಅದರಲ್ಲಿ ಒಂದು ಸರಾಯಿ ಬಾಟಲಿ ಇತ್ತು ಮತ್ತು ಸದರಿ ಕಾರ್ ಗೆ ಸಂಬಂಧಿಸಿದ ದಾಖಲೆಗಳೂ ಸಹ ಕಾರಿನಲ್ಲಿಯೇ ಇದ್ದವು. ನಂತರ ಪೊಲೀಸರು ನನ್ನ ಅಣ್ಣ ಹಾಗೂ ಅಲ್ಲಿನ ಇನ್ನೊಬ್ಬ ವ್ಯಕ್ತಿಯನ್ನು ಪಂಚನಾಮೆಗೆ ಪಂಚರಾಗಿ ಬರುವಂತೆ ಕರೆದುಕೊಂಡು ಪಂಚನಾಮೆ ಮಾಡಿ, ಪೋಟೋ ತೆಗೆದರು ಹಾಗೂ ಸದರಿ ಕಾರ್, ಸರಾಯಿ ಬಾಟಲಿ, ಕಾಗದ ಪತ್ರಗಳನ್ನು ಜಪ್ತುಪಡಿಸಿಕೊಂಡರು. ಪೊಲೀಸರು ನಮ್ಮ ಗ್ಯಾರೇಜ್ ಪಂಚನಾಮೆಗಾಗಿ ಬಂದಾಗ, ಅವರು ತಮ್ಮ ಜೊತೆಗೆ ಲ್ಯಾಪ್ ಟಾಪ್ ಹಾಗೂ ಅದಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ತಂದಿದ್ದರು. ಪೊಲೀಸರು ಪಂಚನಾಮೆಯನ್ನು ಕನ್ನಡದಲ್ಲಿ ಬರೆದು ನಂತರ ಅದನ್ನು ನನಗೆ ಹಿಂದಿ ಭಾಷೆಯಲ್ಲಿ ಹೇಳಿ, ತಿಳಿಸಿದ ನಂತರ ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಆಗ ಮದ್ಯಾಹ್ನದ ಸಮಯವಾಗಿರುತ್ತದೆ. ಸಾಕ್ಷಿಯು ತಾನು ಸಹಿ ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು ಪಂಚನಾಮೆಯ ಸಮಯದಲ್ಲಿ ತೆಗೆದ ಎರಡು ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-35 ಮತ್ತು 36 ಎಂದು ಗುರುತಿಸಲಾಯಿತು ನಿಪಿ-35 ಪೋಟೋದಲ್ಲಿ ನಾನು, ಎರಡು ಜನ ಪಂಚರು, ಪೊಲೀಸರು, 2 ನೇ ಆರೋಪಿ ನಮ್ಮ ಗ್ಯಾರೇಜ್ ನ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿಟ್ಟ ಕಾರ್ ಹಾಗೂ 2 ನೇ ಆರೋಪಿ ಇರುತ್ತೇವೆ ಎಂದು ನುಡಿದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ಕಾರ್ ನ್ನು ಈ ದಿನ ನ್ಯಾಯಾಲಯದ ಹೊರಗೆ ನಿಲ್ಲಿಸಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಕಾರ್ ನ್ನು ಈಗಾಗಲೇ ಮುದ್ದೆ ಮಾಲು-11 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಷದ್ರಿ ವಸ್ತುವಿನ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

6. ಈಗ ನ್ಯಾಯಾಲಯದ ಮುಂದೆ ಇರುವ ಸರಾಯಿ ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು–13 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ಕಾರಿನ ಒಂದು ಲ್ಯಾಮಿನೇಷನ್ ಮಾಡಿದ B Extract ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–37 ಎಂದು ಹಾಗೂ ಇತರೇ ದಾಖಲೆಗಳಾದ ಒಂದು Insurance ಪ್ರತಿ, ಒಂದು Emission Test ಪ್ರತಿ, ಎರಡು ರಶೀದಿಗಳು, ಒಂದು Pre Owned Car Booking/Commitment check list, ಮೂರು Form No:29, ಒಂದು Form No:30, ಒಂದು issue of clearance certificate ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ–38 ಎಂದು ಗುರುತಿಸಲಾಯಿತು. ನಂತರ ನಾನು ಈ ಬಗ್ಗೆ ಪೊಲೀಸರ ಮುಂದೆ ಹಿಂದಿ ಭಾಷೆಯಲ್ಲಿ ಹೇಳಿಕೆಯನ್ನು ನೀಡಿದ್ದು, ಅದನ್ನು ಪೊಲೀಸರು ಕನ್ನಡದಲ್ಲಿ ಟೈಪ್ ಮಾಡಿಕೊಂಡು, ನಂತರ ಅದನ್ನು ನನಗೆ ಹಿಂದಿ ಭಾಷೆಯಲ್ಲಿ ಅನುವಾದ ಮಾಡಿ ಹೇಳಿರುತ್ತಾರೆ.

7. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ 1 ನೇ ಆರೋಪಿಯು ನನ್ನ ಜೊತೆಯಲ್ಲಿ ಮಾತನಾಡಿದಾಗ, ಸದರಿ ಕರೆಯ ಸಂಭಾಷಣೆಯು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಆಗಿರುವ ಬಗ್ಗೆ ಹೇಳಿದ್ದು, ಪೊಲೀಸರು ನನ್ನಿಂದ ಮೊಬೈಲ್ ನ್ನು ಪಡೆದುಕೊಂಡು, ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ತಮ್ಮ ಲ್ಯಾಪ್ ಟಾಪ್ ಗೆ ವರ್ಗಾಯಿಸಿಕೊಂಡು, ಸದರಿ ಸಂಭಾಷಣೆಯನ್ನು ನನಗೆ ಕೇಳಿಸಿದ್ದು, ಅದಕ್ಕೆ ನಾನು ಇದೇ ಇರುತ್ತದೆ ಎಂದು ಹೇಳಿದ್ದು, ನಂತರ ಪೊಲೀಸರು ಸದರಿ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿ, ಸದರಿ ಸಿಡಿಯನ್ನು ನನ್ನ ಸಮಕ್ಷಮ ಜಪ್ತು ಪಂಚನಾವೆಯಡಿ ಜಪ್ತುಪಡಿಸಿಕೊಂಡರು. ಪೊಲೀಸರು ಪಂಚನಾಮೆಯನ್ನು ಕನ್ನಡದಲ್ಲಿ ಬರೆದು ನಂತರ ಅದನ್ನು ನನಗೆ ಹಿಂದಿ ಭಾಷೆಯಲ್ಲಿ ಹೇಳಿ, ತಿಳಿಸಿದ ನಂತರ ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಸಿಡಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–39 ಎಂದು, ಸಾಕ್ಷಿಯ ಸಹಿಯನ್ನು ನಿಪಿ–39(ಎ) ಎಂದು ಗುರುತಿಸಲಾಯಿತು. ಈ ಸಮಯದಲ್ಲಿ ಆರೋಪಿ ಪರ ವಕೀಲರು ಸದರಿ ಸಿಡಿಯನ್ನು ಸೀಲ್

ಮಾಡಿರುವುದಿಲ್ಲ ಎಂದು ಹೇಳಿದ್ದು, ಅದನ್ನು ಪರಿಶೀಲಿಸಲಾಗಿ, ಅದನ್ನು ಒಂದು ಪ್ಲಾಸ್ಟಿಕ್ ಕವರ್ ನಲ್ಲಿಟ್ಟು, ಮುಚ್ಚಿರುವುದು ಕಂಡುಬಂದಿರುತ್ತದೆ. ಸದರಿ ಸಿಡಿಯನ್ನು ನ್ಯಾಯಾಲಯದ ಕಂಪ್ಯೂಟರ್ ಗೆ ಅಳವಡಿಸಿ, ಅದರಲ್ಲಿದ್ದ ಆಡಿಯೋವನ್ನು ಪ್ಲೇ ಮಾಡಿ ಕೇಳಲಾಗಿ, ಅದರಲ್ಲಿ ಎರಡು ಜನ ವ್ಯಕ್ತಿಗಳು ಹಿಂದಿ ಭಾಷೆಯಲ್ಲಿ ಮಾತನಾಡಿರುವುದು ಅದರಲ್ಲಿ ಒಂದನೇ ವ್ಯಕ್ತಿಯು ಕಾರ್ ಎಲ್ಲಿದೆ ಎಂದು ಕೇಳಿದ್ದು, ಅದಕ್ಕೆ ಎರಡನೇ ವ್ಯಕ್ತಿಯು ಕಾರ್ ಇಲ್ಲಿಯೇ ಇದೆ ಎಂದು ಹೇಳಿದ್ದು, ನಂತರ ಒಂದನೇ ವ್ಯಕ್ತಿಯು ಸದರಿ ಕಾರ್ ನ ನಂಬರ್ ಪ್ಲೇಟ್ ತೆಗೆದಿಡು ಹಾಗೂ ಕಾರ್ ನ್ನು ಮುಚ್ಚಿಡು ಎಂದು ಹೇಳಿರುವುದು ಕಂಡುಬಂದಿರುತ್ತದೆ. ಕಡತದಲ್ಲಿ ಸಿಡಿಯೊಂದಿಗೆ ಕಲಂ 65–ಬಿ ಪ್ರಮಾಣ ಪತ್ರ ಇಲ್ಲವಾದ್ದರಿಂದ ಸಿಡಿಯನ್ನು ಗುರುತಿಸಲು ಆರೋಪಿಗಳ ಪರ ವಕೀಲರು ತಕರಾರು ಎತ್ತಿದ್ದು, ಸದರಿ ಸಿಡಿಯನ್ನು ತಕರಾರಿಗೆ ಒಳಪಟ್ಟು ನಿಪಿ–40 ಎಂದು, ಸದರಿ ಸಿಡಿಯೊಂದಿಗೆ ಇರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–40(ಎ) ಎಂದು ಗುರುತಿಸಲಾಯಿತು.

8. ಆ ನಂತರ 2 ನೇ ಆರೋಪಿಯು ಸದರಿ ಕಾರ್ ನ್ನು ಬಳಸಿಕೊಂಡು ಕೊಲೆ ಮಾಡಿರುತ್ತಾನೆ ಎಂದು ನನಗೆ ತಿಳಿದು ಬಂದಿರುತ್ತದೆ. ಆ ನಂತರ 2018 ರ ನವೆಂಬರ್ ತಿಂಗಳಲ್ಲಿ ಕಾರವಾರ ಪೊಲೀಸರು ನನ್ನನ್ನು ಕಾರವಾರಕ್ಕೆ ಬರಲು ಹೇಳಿದ್ದು, ನಾನು ಕಾರವಾರದ ಪೊಲೀಸ್ ಠಾಣೆಗೆ ಬಂದಿರುತ್ತೇನೆ, ನಂತರ ಕಾರವಾರ ಪೊಲೀಸರು ನನ್ನನ್ನು ಕಾರವಾರದ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು, ನಾನು ಈಗ ಹೇಳಿದ ವಿಷಯವನ್ನು ನ್ಯಾಯಾಲಯದ ಮುಂದೆ ಹೇಳಿರುತ್ತೇನೆ. ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ ನಾನು ಹಿಂದಿ ಭಾಷೆಯಲ್ಲಿ ನೀಡಿದ್ದು, ಅದನ್ನು ನ್ಯಾಯಾಧೀಶರು ಕನ್ನಡ ಭಾಷೆ ಅನುವಾದಿಸಿ ದಾಖಲಿಸಿಕೊಂಡು, ನನಗೆ ಹಿಂದಿ ಭಾಷೆಯಲ್ಲಿ ತಿಳಿಸಿದ ನಂತರ ನಾನು ಸದರಿ ಹೇಳಿಕೆಗೆ ಸಹಿ ಮಾಡಿರುತ್ತೇನೆ ಹಾಗೂ ಸದರಿ ಹೇಳಿಕೆಯನ್ನು ನಾನು ಸ್ವ ಇಚ್ಛೆಯಿಂದ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–41 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ–41(ಎ) ಮತ್ತು 41(ಬಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ರಿಜ್ವಾನ್, 2 ನೇ ಆರೋಪಿ ಮುಸ್ತಾಕ್ ಹಾಗೂ 4 ನೇ ಆರೋಪಿ ನಿಖಿಲ್ ನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

9. ನಾನು ಖಾನಾಪುರದಲ್ಲಿ ಸ್ವಂತ ಗ್ಯಾರೇಜ್ ನಡೆಸುತ್ತಿದ್ದು, ಗ್ಯಾರೇಜ್ ನಡೆಸುತ್ತಿರುವ ಕಟ್ಟಡವನ್ನು ನಾನು ಜೈರಾಮ ಪಾಟೀಲ ರವರಿಂದ ಬಾಡಿಗೆಯ ಮೇಲೆ ಪಡೆದಿರುತ್ತೇನೆ. ಸದರಿ ಕಟ್ಟಡವನ್ನು ನಾನು ಬಾಡಿಗೆ ಮೇಲೆ ಪಡೆದಿರುವ ಬಗ್ಗೆ ಯಾವುದೇ ಕರಾರು ಪತ್ರ ಇರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಗ್ಯಾರೇಜ್ ನಡೆಸುತ್ತಿರುವ ಅಂಗಡಿಯು 15x10 ಅಡಿ ಅಳತೆ ಇರುತ್ತದೆ. ನಾನು ನಡೆಸುತ್ತಿರುವ ಗ್ಯಾರೇಜ್ ಗೋವಾ-ಬೆಳಗಾಂವನ ಮುಖ್ಯ ರಸ್ತೆಗೆ ಹೊಂದಿಕೊಂಡಿರುತ್ತದೆ. ನನ್ನ ಗ್ಯಾರೇಜ್ ಬರುವ ವಾಹನಗಳನ್ನು ನನ್ನ ಗ್ಯಾರೇಜ್ ಮುಂದುಗಡೆಯೇ ನಿಲ್ಲಿಸಿ, ರಿಪೇರಿ ಮಾಡಿ ಕೊಡುತ್ತೇವೆ. ನನ್ನ ಗ್ಯಾರೇಜ್ ನ ಅಕ್ಕ-ಪಕ್ಕದಲ್ಲಿ ಅಂಗಡಿಗಳು ಇರುತ್ತವೆ ಹಾಗೂ ಗ್ಯಾರೇಜ್ ನ ಮುಂದಿನ ರಸ್ತೆಯ ನಂತರದ ಜಾಗದಲ್ಲಿ ಕದ್ದು ಪಾಟೀಲ ರವರ ಮನೆ ಇರುತ್ತದೆ. ನನ್ನ ಗ್ಯಾರೇಜ್ ನಲ್ಲಿಯಾಗಲೀ ಅಥವಾ ಅಕ್ಕ-ಪಕ್ಕದಲ್ಲಿಯಾಗಲೀ ಸಿಸಿಟಿವಿ ಕ್ಯಾಮೇರಾಗಳು ಇರುವುದಿಲ್ಲ.

10. ನಾನು ಗ್ಯಾರೇಜ್ ನಡೆಸುವ ಅಂಗಡಿಯನ್ನು ಮಾತ್ರ ಜೈರಾಮ ಪಾಟೀಲ ರವರಿಂದ ಬಾಡಿಗೆಗೆ ಪಡೆದಿರುತ್ತೇನೆ. 2 ನೇ ಆರೋಪಿಯು ವರ್ಷದಲ್ಲಿ 2 ರಿಂದ 2 ½ ತಿಂಗಳು ಕಾಲ ಟ್ರಕ್ ಗಳನ್ನು ತರುತ್ತಿದ್ದರು ಹಾಗೂ 5 ರಿಂದ 6 ಟ್ರಕ್ ಗಳನ್ನು ತರುತ್ತಿದ್ದರು. ನಾನು 2 ನೇ ಆರೋಪಿಗೆ ಟ್ರಕ್ ರಿಪೇರಿ ಮಾಡಿಕೊಡುತ್ತಿದ್ದ ಬಗ್ಗೆ ಬಿಲ್ ಗಳನ್ನು ಕೊಡುತ್ತಿದ್ದೆ. ಪೊಲೀಸರು ನನ್ನಿಂದ ಯಾವುದೇ ಬಿಲ್ ಗಳನ್ನು ಕೇಳಿರುವುದಿಲ್ಲ ಹಾಗೂ ನಾನು ಸಹ ಯಾವುದೇ ಬಿಲ್ ಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನನ್ನ ಬಳಿ ಗ್ಯಾರೇಜ್ ನಡೆಸಲು ಲೈಸೆನ್ಸ್ ಇರುವುದಿಲ್ಲ. 2 ನೇ ಆರೋಪಿಯು ದಾಂಡೇಲಿಯವನು, ಆದರೆ ಆತನ ಮನೆ ದಾಂಡೇಲಿಯಲ್ಲ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಮುನ್ಸಿಪಾಲಟಿಯಿಂದ ಇಂಡಿಯನ್ ಮೋಟಾರ್ಸ್ ಎಂಬ ಹೆಸರಿನಡಿ ಗ್ಯಾರೇಜ್ ನಡೆಸಲು ನಾನು ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ.

11. ದಿಃ 16-10-2018 ರಂದು 2 ನೇ ಆರೋಪಿ ನನ್ನ ಬಳಿ ಬಂದಾಗ ಆತನೊಂದಿಗೆ ಬೇರೆ ಯಾರು ಇರುವುದಿಲ್ಲ. ಆ ದಿನ ನಾನು ಗ್ಯಾರೇಜ್ ಮುಂದೆ ರಿಪೇರಿ ಕೆಲಸ ಮಾಡುತ್ತಿದ್ದು, 2 ನೇ ಆರೋಪಿ ಬಂದು, ತಾನು ತಂದಿದ್ದ ಕಾರನ್ನು ನನ್ನ ಗ್ಯಾರೇಜ್ ನ ಮುಂದಿನ ರಸ್ತೆಯ ನಂತರದ ಜಾಗದಲ್ಲಿ ನಿಲ್ಲಿಸಿರುತ್ತಾನೆ ಹಾಗೂ ಆ ಜಾಗದಲ್ಲಿಯೂ ಸಹ ನಾನು ಕೆಲಸವನ್ನು ಮಾಡುತ್ತೇನೆ. ಆ ಜಾಗವು ಕದ್ದು ಪಾಟೀಲ ರವರಿಗೆ ಸೇರಿರುತ್ತದೆ. ಕದ್ದು ಪಾಟೀಲ ರವರ ಮನೆ

ಹಾಗೂ ರಸ್ತೆಯ ನಡುವೆ ಇರುವ ಜಾಗವು ಸರಕಾರಕ್ಕೆ ಸೇರಿದ ಜಾಗವಾಗಿರುತ್ತದೆ. ನಾನು ಕಾರವಾರದ ನ್ಯಾಯಾಲಯದಲ್ಲಿ ನಿಪಿ-41 ರಂತೆ ಹೇಳಿಕೆ ನೀಡುವಾಗ ಪೊಲೀಸರು ನನಗೆ ಇದೇ ರೀತಿ ಹೇಳಬೇಕೆಂದು ಹೇಳಿಕೊಟ್ಟಿರುವುದಿಲ್ಲ.

12. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯಲ್ಲಿ "ದಿಃ 16-10-2018 ರಂದು ರಾತ್ರಿ 08-00 ಗಂಟೆ ಸಮಯದಲ್ಲಿ ನಾನು ನನ್ನ ಗ್ಯಾರೇಜ್ ನಲ್ಲಿದ್ದಾಗ, 2 ನೇ ಆರೋಪಿಯು ಒಂದು ಜೆನ್ ಕಾರಿನಲ್ಲಿ ನಮ್ಮ ಗ್ಯಾರೇಜ್ ಗೆ ಬಂದು, ನನ್ನ ಬಳಿ ಮೊಬೈಲ್ ಪಡೆದುಕೊಂಡು ಸ್ವಲ್ಪ ದೂರ ಹೋಗಿ, ಯಾರೊಂದಿಗೋ ಫೋನ್ ನಲ್ಲಿ ಮಾತನಾಡಿ, ಪುನಃ ವಾಪಸ್ ಬಂದು ನನ್ನ ಫೋನ್ ನ್ನು ನನಗೆ ನೀಡಿ, ತಾನು ಮನೆಯಲ್ಲಿ ಜಗಳವಾಡಿಕೊಂಡು ಬಂದಿರುವುದಾಗಿ ಹೇಳಿ, ನನ್ನ ಬಳಿ ರೂ.2,000/- ಗಳನ್ನು ಪಡೆದುಕೊಂಡು, ತಾನು ತಂದಿದ್ದ ಕಾರ್ ನ್ನು ಚಾವಿ ಸಮೇತ ನಮ್ಮ ಗ್ಯಾರೇಜ್ ನ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿ, ತಾನು ಬೆಳಗಾಂವಗೆ ಹೋಗುವುದಾಗಿ ಹೇಳಿ ಹೋಗಿರುತ್ತಾನೆ" ಎಂದು ಹೇಳಿದ್ದು, ನಿಪಿ-41 ರ ಹೇಳಿಕೆಯಲ್ಲಿ "ದಿಃ 17-10-2018 ಬೆಳಿಗ್ಗೆ 12-30 ಗಂಟೆಗೆ ಮುಸ್ತಾಕನು ನನ್ನ ಬಳಿ ಬಂದ. ಮುಸ್ತಾಕ್ ಈತನು ತನ್ನ ಮಾರುತಿ ಜೆನ್ ವಾಹನವನ್ನು ನನ್ನ ಮೆಕ್ಯಾನಿಕ್ ಶಾಪ್ ನಲ್ಲಿ ಬಿಟ್ಟು, 2 ಗಂಟೆಯ ಕಾಲಾವಕಾಶದಲ್ಲಿ ಬೆಳಗಾಂವಗೆ ಹೋಗಿ, ಬರುವುದಾಗಿ ತಿಳಿಸಿದ. ಆ ಸಮಯದಲ್ಲಿ ನಾನು ಮತ್ತೊಂದು ವಾಹನದ ಕೆಳಗಡೆ ಕೆಲಸ ಮಾಡುತ್ತಿದ್ದು ಮುಸ್ತಾಕ್ ನ ಜೆನ್ ವಾಹನದ ಬೀಗ ವಾಹನಕ್ಕೆ ಇದೆ ಎಂದು ಮತ್ತು ವಾಹನದ ಡೋರ್ ನ ಗ್ಲಾಸ್ ಓಪನ್ ಆಗಿದೆ ಎಂದು ತಿಳಿಸಿ ಹೋದ" ಎಂದು ಹೇಳಿಕೆಯನ್ನು ನೀಡಿದ್ದು, ಈ ಎರಡು ಹೇಳಿಕೆಗಳಲ್ಲಿ ಯಾವುದು ಸರಿ ಇದೆ ಎಂದರೆ ಸಾಕ್ಷಿಯು ನಿಪಿ-41 ರ ಹೇಳಿಕೆಯು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-41 ರಲ್ಲಿರುವ "ದಿಃ 17-10-2018 ಬೆಳಿಗ್ಗೆ 12-30 ಗಂಟೆಗೆ_________ಓಪನ್ ಆಗಿದೆ ಎಂದು ತಿಳಿಸಿ ಹೋದ" ಎಂಬ ಹೇಳಿಕೆಯನ್ನು ನಿ.ಡಿ-1 ಎಂದು ಗುರುತಿಸಲಾಯಿತು.

13. ಅದೇ ನಿಪಿ-14 ರ ಹೇಳಿಕೆಯಲ್ಲಿ "ನಾನು ಖಾನಾಪುರ ಪೊಲೀಸ್ ಠಾಣೆಗೆ ದಿಃ 19-10-2018 ರಂದು ಬೆಳಿಗ್ಗೆ ಸುಮಾರು 09-00 ಗಂಟೆಗೆ ಹೋಗಿ ಆದ ಘಟನೆಯನ್ನು ವಿವರಿಸಿದೆ. ಪೊಲೀಸರು ಸಂಜೆಯ ವರೆಗೆ ಕಾದು ನೋಡಲು ತಿಳಿಸಿದರು. ರಾತ್ರಿ 08-00 ಗಂಟೆಗೆ ನಾನು ವಾಹನವನ್ನು ಖಾನಾಪುರ ಪೊಲೀಸ್ ಠಾಣೆಗೆ ಹೋಗಿ, ಅಲ್ಲಿ ವಾಹನವನ್ನು

ನಿಲ್ಲಿಸಿ ವಾಹನದ ಬೀಗವನ್ನು ಅಲ್ಲಿನ ಪೊಲೀಸರ ಕೈಗೆ ಒಪ್ಪಿಸಿದೆನು. ಪೊಲೀಸರಿಗೆ ನನ್ನ ಮೊಬೈಲ್ ಸಂಖ್ಯೆಯನ್ನು ಕೊಟ್ಟು ಬಂದಿದ್ದೆ. ಅದೇ ದಿನ ಅಂದರೆ ದಿಃ 19-10-2018 ರಂದು ನನಗೆ ಕಾರವಾರ ಶಹರ ಪೊಲೀಸ್ ಠಾಣೆಯಿಂದ ರಾತ್ರಿ 09-00 ಗಂಟೆಗೆ ಮುಸ್ತಾಕನು ನನ್ನ ಬಳಿ ಇಟ್ಟ ವಾಹನ ಎಲ್ಲಿದೆ ಎಂದು ಕೇಳಿ ಕರೆ ಬಂದಿದ್ದು, ನಾನು ಅವರಿಗೆ ಖಾನಾಪುರ ಪೊಲೀಸ್ ಠಾಣೆಯಲ್ಲಿ ನಿಲ್ಲಿಸಿ ಬೀಗವನ್ನು ಪೊಲೀಸರಿಗೆ ನೀಡಿದ್ದೇನೆ ಎಂದು ತಿಳಿಸಿದೆನು" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯ ಪ್ರಕಾರ ಜೆನ್ ಕಾರ್ ಖಾನಾಪುರ ಪೊಲೀಸ್ ಠಾಣೆಯ ವಶದಲ್ಲಿತ್ತು ಎಂದರೆ ಸರಿ. ಆ ನಂತರ 2 ನೇ ಆರೋಪಿಯು ಕಾರ್ ನ್ನು ನನ್ನ ಗ್ಯಾರೇಜ್ ನ ಬಳಿ ತಂದು ಇಟ್ಟಿರುವುದಿಲ್ಲ ಎಂದರೆ ಸರಿ.

14. ದಿಃ 27-10-2018 ರಂದು ಕಾರವಾರ ಪೊಲೀಸರು ಸದರಿ ಕಾರ್ ನ್ನು ನನ್ನ ನನ್ನ ಗ್ಯಾರೇಜ್ ಬಳಿ ತಂದು, ಪಂಚನಾಮೆ ಮಾಡಿ, ಪೋಟೊ ತೆಗೆದು, ಸರಾಯಿ ಬಾಟಲಿ ಹಾಗೂ ಕಾರಿನ ದಾಖಲೆಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಆ ದಿನ ಕಾರವಾರ ಪೊಲೀಸರು 2 ನೇ ಆರೋಪಿಯೊಂದಿಗೆ ಕಾರನ್ನು ತಂದಿರುತ್ತಾರೆ. ನಾನು ಈ ದಿನ ಮುಖ್ಯ ವಿಚಾರಣೆಯಲ್ಲಿ "ದಿಃ 27-10-2018 ರಂದು ಬೆಳಿಗ್ಗೆ ಸುಮಾರು 11-00 ಗಂಟೆಗೆ ಕಾರವಾರ ಪೊಲೀಸರು 2 ನೇ ಆರೋಪಿಯನ್ನು ನಮ್ಮ ಗ್ಯಾರೇಜ್ ಬಳಿ ಕರೆದುಕೊಂಡು ಬಂದು, ಇಲ್ಲಿ ವಾಹಿದ್ ಎನ್ನುವವರು ಯಾರು ಎಂದು ಕೇಳಿದ್ದು, ಅದಕ್ಕೆ ನಾನೇ ಎಂದು ಹೇಳಿರುತ್ತೇನೆ. ನಂತರ ಪೊಲೀಸರು 2 ನೇ ಆರೋಪಿಗೆ ಕಾರ್ ನ್ನು ಎಲ್ಲಿ ನಿಲ್ಲಿಸಿಟ್ಟಿದ್ದೀಯಾ ಎಂದು ಕೇಳಿದ್ದು, ಆಗ 2 ನೇ ಆರೋಪಿಯು ನಮ್ಮ ಗ್ಯಾರೇಜ್ ನಲ್ಲಿ ತಾನು ನಿಲ್ಲಿಸಿಟ್ಟ ಕಾರ್ ನ್ನು ತೋರಿಸಿದ್ದು, ಪೊಲೀಸರು ಸದರಿ ಕಾರ್ ತೆಗೆದು ನೋಡಿದಾಗ, ಚಾವಿ ಕಾರಿನಲ್ಲಿಯೇ ಇತ್ತು, ಅದರಲ್ಲಿ ಒಂದು ಸರಾಯಿ ಬಾಟಲಿ ಇತ್ತು ಮತ್ತು ಸದರಿ ಕಾರ್ ಗೆ ಸಂಬಂಧಿಸಿದ ದಾಖಲೆಗಳೂ ಸಹ ಕಾರಿನಲ್ಲಿಯೇ ಇದ್ದವು. ನಂತರ ಪೊಲೀಸರು ನನ್ನ ಅಣ್ಣ ಹಾಗೂ ಅಲ್ಲಿನ ಇನ್ನೊಬ್ಬ ವ್ಯಕ್ತಿಯನ್ನು ಪಂಚನಾಮೆಗೆ ಪಂಚರಾಗಿ ಬರುವಂತೆ ಕರೆದುಕೊಂಡು ಪಂಚನಾಮೆ ಮಾಡಿ, ಪೋಟೋ ತೆಗೆದರು ಹಾಗೂ ಸದರಿ ಕಾರ್, ಸರಾಯಿ ಬಾಟಲಿ, ಕಾಗದ ಪತ್ರಗಳನ್ನು ಜಪ್ತುಪಡಿಸಿಕೊಂಡರು" ಎಂದು ಸಾಕ್ಷ್ಯವನ್ನು ನುಡಿದಿದ್ದು ಯಾವುದು ಸರಿ ಇರುತ್ತದೆ ಎಂದು ಕೇಳಲಾಗಿ, ಸಾಕ್ಷಿಯು ದಿಃ 19-10-2018 ರಂದು ನಾನು ಕಾರ್ ನ್ನು ಖಾನಾಪುರ ಪೊಲೀಸ್ ಠಾಣೆಯಲ್ಲಿ ಬಿಟ್ಟಿದ್ದು, ಸದರಿ ಕಾರನ್ನು ಕಾರವಾರ

ಪೊಲೀಸರು ದಿಃ 20–10–2018 ರಂದು ಕಾರವಾರಕ್ಕೆ ತಂದಿರುತ್ತಾರೆ ಎಂದು ನುಡಿಯುತ್ತಾರೆ.

15. ನಿಪಿ–34 ಪಂಚನಾಮೆಯನ್ನು ಪೊಲೀಸರು ಮೊದಲೇ ತಯಾರಿಸಿಕೊಂಡು ಬಂದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸ್ಥಳದಲ್ಲಿ ತಯಾರಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ಮೊದಲು ನಾನು ಕಾರಿನೊಳಗೆ ಸರಾಯಿ ಬಾಟಲಿ ಹಾಗೂ ಕಾಗದ ಪತ್ರಗಳನ್ನು ನೋಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಸರಾಯಿ ಬಾಟಲಿ ಹಾಗೂ ಕಾಗದ ಪತ್ರಗಳನ್ನು ತೆಗೆದುಕೊಂಡ ಕಾರಣ, ನಾನು ಸರಾಯಿ ಬಾಟಲಿ ಹಾಗೂ ಕಾಗದ ಪತ್ರಗಳನ್ನು ಜಪ್ತುಪಡಿಸಿಕೊಂಡರು ಎಂದು ಹೇಳಿರುತ್ತೇನೆ ಎಂದರೆ ಸರಿ. ಕಾರಿನೊಳಗಡೆ ಸರಾಯಿ ಬಾಟಲಿ ಹಾಗೂ ಕಾಗದ ಪತ್ರಗಳನ್ನು ಯಾರು ಇಟ್ಟರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಕಾರಿನ ಮಾಲೀಕರು ಯಾರು ಎಂದು ಸಹ ನನಗೆ ಹೇಳಲು ಬರುವುದಿಲ್ಲ. ಸದರಿ ಕಾರಿನ ನಂಬರ್ ಹೇಳಲು ಬರುತ್ತದೆಯಾ? ಎಂದರೆ ಸಾಕ್ಷಿಯು ಎಂ.ಹೆಚ್–09/ಬಿ.ಕೆ ಎಂದು ಮಾತ್ರ ನನಗೆ ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ.

16. ಈ ದಿನ ನಾನು ನ್ಯಾಯಾಲಯಕ್ಕೆ ಬಂದಾಗ ಮೃತನ ಅಣ್ಣ ರಾಜೇಶ ನಾಯರ್ ಸಹ ಬಂದಿರುತ್ತಾನೆ ಎಂದರೆ ಸರಿ. ಸಾಕ್ಷ್ಯ ನೀಡುವ ಮೊದಲು ನಾನು ಆತನೊಂದಿಗೆ ಮಾತನಾಡಿರುತ್ತೇನೆ ಎಂದರೆ ಸರಿ. ಈ ದಿನ ನಾನು ಖಾನಾಪುರದೊಂದಿಗೆ ಇತರೇ 6 ಜನ ಬಂದಿರುತ್ತಾರೆ. ಈ ದಿನ ನಾನು ಊಟದ ಸಮಯದಲ್ಲಿ ಊಟಕ್ಕೆ ಹೋದಾಗ, ನಮ್ಮ ಜೊತೆ ಮೃತನ ಅಣ್ಣನು ಸಹ ಬಂದಿರುತ್ತಾನೆ ಎಂದರೆ ಸರಿ. ದಿಃ 16–10–2018 ರಂದು 2 ನೇ ಆರೋಪಿ ನನ್ನ ಗ್ಯಾರೇಜ್ ಗೆ ಬಂದು ಕಾರನ್ನು ನಿಲ್ಲಿಸಿ ಹೋಗಿರುತ್ತಾನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿ. ದಿಃ 17–10–2018 ರಂದು 1, 2 ಮತ್ತು 4 ನೇ ಆರೋಪಿಗಳು ನನ್ನ ಗ್ಯಾರೇಜ್ ಬಳಿ ಬಂದು, ಜೆನ್ ಕಾರ್ ನ್ನು ನೋಡಿ, ಹೋಗಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ 19–10–2018 ರಂದು ನಾನು ಖಾನಾಪುರ ಪೊಲೀಸ್ ಠಾಣೆಗೆ ಹೋಗಿ ವಿಷಯ ತಿಳಿಸಿದ್ದು, ಆಗ ಅವರು ಈ ದಿನ ನೋಡೋಣ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

17. 2018 ರಲ್ಲಿ ನಾನು ವಿಪ್ರೋ ಕಂಪನಿಯ Second handle ಮೊಬೈಲ್ ನ್ನು ಖರೀದಿಸಿದ್ದೆ, ಆದರೆ ಅದಕ್ಕೆ ಬಿಲ್ ಇರುವುದಿಲ್ಲ ಹಾಗೂ ಯಾವ ತಿಂಗಳು ಖರೀದಿಸಿದ್ದೆ ಎಂದು ನನಗೆ ಗೊತ್ತಿಲ್ಲ. ಸದರಿ ಮೊಬೈಲ್ ನನ್ನ ಹೆಸರಿನಲ್ಲಿರುವುದಿಲ್ಲ ಎಂದರೆ ಸರಿ. ನಾನು ಈ ಮೊಬೈಲ್ ನ್ನು ಖರೀದಿಸಿದ ನಂತರ 2 ನೇ ಆರೋಪಿ ನನಗೆ 20 ಬಾರಿ ಕರೆ ಮಾಡಿರಬಹುದು. ಆತ ಕರೆ ಮಾಡಿರುವುದು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಆಗಿರುವುದು ನನಗೆ ಗೊತ್ತಿಲ್ಲ. 2 ನೇ ಆರೋಪಿ ಎಂದಿಗೂ ನನ್ನ ಬಳಿ ಗ್ಯಾರೇಜ್ ಬಳಿ ಬಂದಿರುವುದಿಲ್ಲ, ಯಾವುದೇ ಟ್ರಕ್ ಗಳನ್ನು ತಂದಿಲ್ಲ ಹಾಗೂ ನಾನು ಸಹ ಟ್ರಕ್ ಗಳನ್ನು ರಿಪೇರಿ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

18. ನವೆಂಬರ್ ತಿಂಗಳ 5 ನೇ ತಾರೀಖಿನಂದು ಕಾರವಾರ ಪೊಲೀಸರು ನನ್ನನ್ನು ವಿಚಾರಣೆಗೆ ಕರೆದಿರುತ್ತಾರೆ. ಆ ದಿನ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಹಾಗೂ ಪೊಲೀಸರು ಅದನ್ನು ಟೈಪ್ ಮಾಡಿಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ನೀಡುವ ಮೊದಲು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಮೃತನ ಅಣ್ಣನಾದ ರಾಜೇಶ ನಾಯರ್ ಹಾಗೂ ಪೊಲೀಸರ ಮಾತು ಕೇಳಿ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದ**

19. ನ್ಯಾಯಾಲಯದಲ್ಲಿ ಸುಳ್ಳು ಹೇಳಿದರೆ ಏನಾಗುತ್ತದೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ನಿಪಿ-41 ರ ಹೇಳಿಕೆಯಲ್ಲಿ 4 ನೇ ಆರೋಪಿಯ ಬಗ್ಗೆ ಏನು ಹೇಳಿರುವುದಿಲ್ಲ ಎಂದರೆ ಸರಿ. 4 ನೇ ಆರೋಪಿಯನ್ನು ಈ ದಿನಕ್ಕೆ ಮೊದಲು ನಾನು ಎಂದಿಗೂ ನೋಡಿರುವುದಿಲ್ಲ ಎಂದರೆ ಸರಿ. 4 ನೇ ಆರೋಪಿಯನ್ನು ಗುರುತಿಸುವ ಕುರಿತು ಪೊಲೀಸರು ನನ್ನ ಸಮಕ್ಷಮ ಯಾವುದೇ ಗುರುತು ಕವಾತನ್ನು ನಡೆಸಿರುವುದಿಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

20. ನಿಪಿ-41 ರ ಹೇಳಿಕೆಯಲ್ಲಿ 1 ನೇ ಆರೋಪಿಯು ದಿಃ 17-10-2018 ರಂದು 1 ನೇ ಆರೋಪಿ ನನ್ನ ಗ್ಯಾರೇಜ್ ಬಳಿ ಬಂದಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಟ್ರಕ್ ಗಳನು ರಿಪೇರಿ ಮಾಡಿಕೊಟ್ಟ ಬಗ್ಗೆ ಹಾಗೂ 1 ನೇ ಆರೋಪಿ ಹಣ ಕೊಟ್ಟ ಬಗ್ಗೆ ರಶೀದಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಎಂದಿಗೂ ನನ್ನ ಗ್ಯಾರೇಜ್ ಬಂದಿಲ್ಲ ಹಾಗೂ ಆತನ ಪರಿಚಯ ನನಗೆ ಇರುವುದಿಲ್ಲ ಸರಿಯಲ್ಲ. ನನ್ನ ಬಳಿ ಒಂದು ಮೊಬೈಲ್ ಹಾಗೂ ಅದಕ್ಕೆ ಒಂದು ಸಿಮ್ ಮಾತ್ರ ಇರುತ್ತದೆ. ನಾನು ನನ್ನ ಗೆಳೆಯನಿಂದ ಮೊಬೈಲ್ ನ್ನು ಖರೀದಿದ್ದು, ಆತನ ಹೆಸರು ರಾಮ ರಜಪೂತ. ನನಗೆ ಮೊಬೈಲ್ ನ್ನು ಬಳಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ನನಗೆ ಕರೆ ಮಾಡಲು ಬರುತ್ತದೆ ಎಂದು ನುಡಿಯುತ್ತಾರೆ.

21. ದಿಃ 19-10-2018 ರಂದು ನಾನು ಖಾನಾಪುರ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನನ್ನ ಮೊಬೈಲ್ ನ್ನು ಪಡೆದುಕೊಂಡಿರುವುದಿಲ್ಲ ಹಾಗೂ ನನಗೆ ಕರೆ ಮಾಡಿದವರ ಬಗ್ಗೆಯೂ ಸಹ ವಿಚಾರಣೆ ಮಾಡಿರುವುದಿಲ್ಲ. ದಿಃ 20-10-2018 ರಂದು 1 ನೇ ಆರೋಪಿ ನನಗೆ ಕರೆ ಮಾಡಿದ ವಿಷಯವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಎಷ್ಟು ನಂಬರ್ ಗಳನ್ನು ಬಳಸುತ್ತಾನೆ ಎಂದರೆ ಸಾಕ್ಷಿಯು ಆತನು ನನಗೆ ಒಂದೇ ನಂಬರ್ ನಿಂದ ಕರೆ ಮಾಡುತ್ತಿದ್ದನು ಹಾಗೂ ಆ ನಂಬರ್ ನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಂಬರ್ ನ್ನು ಈಗ ನನಗೆ ಹೇಳಲು ಬರುವುದಿಲ್ಲ ಅದು ನನ್ನ ಮೊಬೈಲ್ ನಲ್ಲಿರುತ್ತದೆ. 1 ನೇ ಆರೋಪಿ ಕರೆ ಮಾಡುತ್ತಿದ್ದ ನಂಬರ್ ನ್ನು ನಾನು ರಿಜ್ವಾನ್ ಕಾರವಾರ ಎಂದು ಸೇವ್ ಮಾಡಿಕೊಂಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿ ನನಗೆ ಒಂದು Unknown ನಂಬರ್ ನಿಂದ ಹಾಗೂ ತನ್ನ ನಂಬರ್ ನಿಂದ ಕರೆ ಮಾಡಿರುತ್ತಾನೆ. 1 ನೇ ಆರೋಪಿ ನನಗೆ Unknown ನಂಬರ್ ನಿಂದ ಕರೆ ಮಾಡಿದಾಗ ಗಾಡಿಯನ್ನು ಸ್ಕ್ರ್ಯಾಪ್ ಮಾಡಲು ಹೇಳಿರುತ್ತಾನೆ ಹಾಗೂ ಅದರ ದಿಃ 17-10-2018 ಆಗಿರುತ್ತದೆ. ಮೊಬೈಲ್ ನಲ್ಲಿ ಆಟೋ ರೆಕಾರ್ಡ್ ಆಗುತ್ತಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿ ನನಗೆ ಕರೆ ಮಾಡಿ ಗಾಡಿಯನ್ನು ಸ್ಕ್ರ್ಯಾಪ್ ಮಾಡಿ, ಮುಚ್ಚಿಡು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-40 ಸಿಡಿಯಲ್ಲಿರುವ ಸಂಭಾಷಣೆಯು 1 ನೇ ಆರೋಪಿಯ ಧ್ವನಿಯಲ್ಲ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಆದ ಸಂಭಾಷಣೆಯಲ್ಲ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯನ್ನು ಪೊಲೀಸರು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ